ಹಿಂದಿ, ಇಂಗ್ಲೀಷಿನಲ್ಲಿ ಬೆರೆಸಿದ ಕನ್ನಡದಲ್ಲಿ ಮಿಮಿಗೂ ಅರ್ಥವಾಗುವಂತೆ ಕಷ್ಟಪಟ್ಟು ವಿವರಿಸಿದರು. 'ಅರ್ಜುನ ಹಾಗೆ ಹೇಳಿದರೂ ಕೊನೆಗೆ ಯುದ್ಧ ಮಾಡಿಯೇ ಮಾಡಿದ. ಆ ಮಹಾ ಯುದ್ಧದಲ್ಲಿ ಲಕ್ಷಾಂತರ ಯೋಧರು ಮಡಿದಿರಲೇಬೇಕು. ಹಾಗಾಗಿ ಅವರ ವಿಧವೆಯರು, ಗಂಡು ದಿಕ್ಕಿಲ್ಲದ ಹೆಂಗಸರು ಅರ್ಜುನ ಅಂದುಕೊಂಡಂತೆ, ವರ್ಣ ಸಂಕರಕ್ಕೆ ಕಾರಣವಾಗಿರಬೇಕು. ವರ್ಣ ಸಂಕರ ಅನ್ನೋದು ಅಲ್ಲಿಂದಲೊ ಅಥವಾ ಅದಕ್ಕಿಂತ ಬಹು ಮೊದಲೇ ಶುರುವಾಗಿರಬೇಕು. ನಮ್ಮ ಕಾರ್ತೀಕನ ಮದುವೆ ಕೂಡ ಒಂದು ರೀತಿಯ ವರ್ಣ ಸಂಕರದ ಮದುವೆಯೆ.'

ಅವರ ಇಂಗ್ಲಿಷು, ಹಿಂದಿ ಬೆರೆಸಿದ ಕನ್ನಡ ಬಹು ತಮಾಷೆಯಾಗಿ ಕಾಣುತ್ತಿತ್ತು. ಕಾರ್ತೀಕನಿಗೆ ನಗೆ ತಡೆದುಕೊಳ್ಳುವುದೇ ದುಸ್ತರವಾಯಿತು. ಆದರೆ ಮಿಮಿ ಇನ್ನಿಲ್ಲದ ಆಸ್ಥೆಯಿಂದ ಅವರು ಹೇಳುವ ಪ್ರತಿಯೊಂದು ಪದವನ್ನೂ ಕೇಳಿಸಿಕೊಂಡು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಳು.

ಬಸವರಾಜಯ್ಯ ಮತ್ತೆ ಮುಂದುವರೆದರು. ನೋಡಿ ಕುರುಕ್ಷೇತ್ರದ ಯುದ್ಧ ನಡೆದು, ಸಾವಿರಾರು ಸಂವತ್ಸರಗಳ ನಂತರ ಬಂದ ಮನುವಿನ ಕಾಲಕ್ಕೆ ಇಂತಹ ಅದೆಷ್ಟೊ ವರ್ಣ ಸಂಕರದ ಸಂಗತಿಗಳು ನಡೆದು ಹೋಗಿರಬೇಕು. ಆದುದರಿಂದಲೇ ಇರಬೇಕು, ಮನು ತನ್ನ ಸ್ಮೃತಿಯಲ್ಲಿ ಈ ರೀತಿಯ ವರ್ಣ ಸಂಕರದಿಂದ ಹುಟ್ಟುವ ಸಂತತಿಗಳಿಗೆ ಒಂದೊಂದಕ್ಕೆ ಒಂದೊಂದು ಹೆಸರನ್ನು ಕೊಡುತ್ತಾನೆ. ಅವನೆಷ್ಟು ಪ್ರಾಕ್ಟಿಕಲ್ ಆಗಿದ್ದನೆಂದರೆ, ಅದಕ್ಕೂ ಮುಂದೆ ಹೋಗಿ ವರ್ಣ ಸಂಕರದಿಂದ ಹುಟ್ಟಿದ ಬೇರೆ ಬೇರೆ ಸಂತತಿಗಳಲ್ಲಿ ಮತ್ತೆ ಕಲಬೆರಕೆಯಾಗಿ ಹುಟ್ಟುವ ಸಂತತಿಗಳಿಗೂ ಬೇರೆ ಬೇರೆ ಹೆಸರುಗಳನ್ನು ಕೊಟ್ಟು ಮತ್ತೆ, ಅವುಗಳಲ್ಲಿ ಯಾವುದು ಮೇಲು, ಯಾವುದು ಕೀಳು ಎಂದು ವರ್ಣಾಶ್ರಮದ ಚೌಕಟ್ಟಿನಲ್ಲೇ ವರ್ಗೀಕರಿಸಿ, ಅವುಗಳಿಗೆ ಮಾನ್ಯತೆ ನೀಡುತ್ತಾನೆ. ಹಾಗೆ ನೋಡಿದರೆ ಇದು ಅನಾದಿಯಿಂದ ಬಂದ ಪಕ್ರಿಯೆ. ಕಾರಣಗಳು ಮಾತ್ರ ಬೇರೆ ಬೇರೆ.  ಸಮುದಾಯಗಳ ಅಥವಾ ಪ್ರಭುತ್ವಗಳ ಕಟ್ಟುಪಾಡುಗಳು ಅಥವಾ ಆಶಯವೇನೇ ಇರಲಿ, ಅವುಗಳನ್ನೆಲ್ಲಾ ಮೀರಿ ಈ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಅದಕ್ಕೆ ಇರಬೇಕು ನಮ್ಮಲ್ಲಿ ನೂರಾರು ಜಾತಿಗಳು, ಉಪ ಜಾತಿಗಳಿರುವುದು ಎಂದು ಹೇಳಿ ಎಲ್ಲರ ಮುಖವನ್ನೊಮ್ಮೆ ದಿಟ್ಟಿಸಿದರು.

ಸ್ವಲ್ಪ ಹೊತ್ತಿನ ನಂತರ ಮೌನವನ್ನು ಮುರಿದು, ಮಿಮಿ ಬಹಳ ಉತ್ಸುಕತೆಯಿಂದ ಇಂಗ್ಲಿಷಿನಲ್ಲಿಯೇ ಹೇಳಿದಳು. ನೀವು ಹೇಳೋದು ಇನ್ನೊಂದು ರೀತಿಯಿಂದ ನಿಜ ಅಂತ ಕಾಣುತ್ತೆ ಅಂಕಲ್. ಇತ್ತೀಚೆಗೆ, ಇಡೀ ದೇಶದಲ್ಲಿ ಹಲವು ಜನಾಂಗದವರ, ಸಮುದಾಯಗಳ ಮತ್ತು ಬೇರೆ ಬೇರೆ ಪ್ರದೇಶದ ಜನಗಳ ಜೀನ್ಸ್ ಅನ್ನು ಪರೀಕ್ಷೆಗೆ ಒಳಪಡಿಸಿದ್ದರು. ಆ ಸಮೀಕ್ಷೆಯಲ್ಲಿ ಕಂಡಿದ್ದೇನಪ್ಪಾ ಅಂದರೆ, ಯಾವುದೇ ಜನಾಂಗದ, ಸಮುದಾಯದ ಅಂದರೆ ಅತ್ಯಂತ ದೂರದ ಹಿಮಾಲಯದ ಕಣಿವೆಗಳಲ್ಲಿ ಮತ್ತು ದುರ್ಗಮವಾದ ಗೊಂಡಾರಣ್ಯಗಳಲ್ಲಿ ವಾಸವಾಗಿರುವ ಜನಾಂಗಗಳ ಜೀನ್ಸ್ ಕೂಡ ಪರಿಶುದ್ಧವಾಗಿಲ್ಲ. ಎಲ್ಲವೂ ವಿವಿಧ ಜೀನ್ಸ್ ಗಳ ಬೆರಕೆಯಿಂದ ಕೂಡಿದೆ ಎಂದು ನಿರ್ಧರಿಸಲಾಯಿತು. 'ವರ್ಣ ಸಂಕರ, ಜಾತಿ ಸಂಕರ ಎಂದರೆ ಇದೇ ಏನೊ ಅಂಕಲ್' ಎಂದಳು.

ಅವಳು ಹೇಳಿದ್ದು ಸುಶೀಲಮ್ಮನಿಗೆ ಅಷ್ಟಿಷ್ಟು ಅರ್ಥವಾಯಿತು. ಆದರೆ ಅವಳ ಸ್ಫುಟವಾದ ಮಾತನ್ನು ಅದೂ ಇಂಗ್ಲಿಷಿನಲ್ಲಿ ಕೇಳಿ, ನನ್ನ ಸೊಸೆ ಎಷ್ಟೊಂದು ಬುದ್ಧಿವಂತಳು ಎನ್ನುವ ಸಂತೋಷ ಸುಶೀಲಮ್ಮನಿಗೆ. ಬಸವರಾಜಯ್ಯನವರ ಮಾತಿನಿಂದಲೋ ಅಥವಾ ಸೊಸೆಯ ಇಂಗ್ಲಿಷು ಮಾತಿನ ಪ್ರಭಾವವೋ ಸುಶೀಲಮ್ಮನಿಗೆ ಸಮಾಧಾನವೆನ್ನಿಸಿ, ಯಾರು ಏನು ಬೇಕಾದರೂ ಹೇಳಲಿ, ನನ್ನ ಮಗ, ಸೊಸೆ ಚೆನ್ನಾಗಿದ್ದರೆ ಸಾಕು ಎಂದು ನಿಟ್ಟುಸಿರು ಬಿಟ್ಟರು.


ಖ್ಯಾತ ಕಥೆಗಾರ್ತಿ

**ಗೀತಾ ಬಿ.ಯು.**

ಅವರ

## ಹೊಸ ಧಾರಾವಾಹಿ

ಇಬ್ಬರು ಮುದ್ದಾದ ಮಕ್ಕಳನ್ನು ಪಡೆದು ಗಂಡ ಅತ್ತೆ–ಮಾವನವರೊಂದಿಗೆ ಯಾವುದೇ ಕೊರತೆ ಇಲ್ಲದಂತೆ ತುಂಬು ಸಂಸಾರದ ನೊಗ ಹೊತ್ತರೂ 'ಅವಳು' ಬದುಕಿನಲ್ಲಿ ಸಂತೃಪ್ತಿ ಕಾಣಲೇ ಇಲ್ಲ. ಹಾಗಿದ್ದರೆ 'ಅವಳ' ಬದುಕಿನ ಒಳಗುದಿ ಏನು?

ಕ್ಷಣ ಕ್ಷಣವೂ ಕುತೂಹಲ ಕೆರಳಿಸುವ ಹೊಚ್ಚ ಹೊಸ ಸಾಮಾಜಿಕ ಕಥಾನಕ.



# ಇರುವುದೆಲ್ಲವ ಬಿಟ್ಟು...

**ಮುಂದಿನ ವಾರ ಆರಂಭ**